SRI H, V. KOUJALGI :—From the records I find 84 persons have paidmoney and plots have been given. If they are not put into possession I will see immediate action is taken.

2-00 P. M.

ಶ್ರೀ ಎಸ್. ಬಂಗಾರಪ್ಪ :—ಗ್ರಾಮ ಬಡಾವಣೆ ಮಾಡುವಾಗ ಯಾವುದೇ ಸ್ಪೆಷಲ್ ಪರ್ಪಸಸ್‌ಗಾಗಿ ಕೆಲವು ಜಮೀನುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಆಯಾ ಗ್ರಾಮಪಂಚಾಯಿತಿಯವರು ನಿರ್ಣಯ ಮಾಡಿ ಮೇಲಿನ ಅಧಿಕಾರಿಗಳಿಗೆ ಒಪ್ಪಿಗೆಗಾಗಿ ಕಳುಹಿಸಿದರೂ ಅವರಿಂದ ಆದೇಶಗಳು ಸಕಾಲದಲ್ಲಿ ಬರದೇ ಬಹಳ ವಿಳಂಬವಾಗುತ್ತದೆ. ಇದರಲ್ಲಿ ಆಸಿಸ್ಟೆಂಟು ಕಮಿಷನರೇ ಲ್ಯಾಂಡು ಅಕ್ವಿಸೆಷನ್ ಅಫಿಸರುಗಳಾಗಿರುತ್ತಾರೆ. ಇವರಿಂದ ಆಕ್ವೈರು ಮಾಡಲು ಕೆಲವು ಕ್ರಮಗಳನ್ನು ಬೇಗನೆ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಸರಕಾರ ಏನು ಮಾಡುತ್ತದೆ ?

ಶ್ರೀ ಹೆಚ್. ವಿ. ಕೌಜಲಗಿ :—ಕಾಯದೆ ಪ್ರಕಾರ ಆಕ್ವೈರು ಮಾಡಬೇಕಾಗುತ್ತದೆ. ಈಗಿರುವ ಕಾಯದೆ ನಿಯಮದ ಪ್ರಕಾರ ಆಕ್ವೈರು ಮಾಡುವಾಗ ಸ್ವಲ್ಪ ತಡವಾಗುತ್ತದೆ. ಇದರ ಬಗ್ಗೆ ಅಧಿಕಾರಿಗಳಿಗೆ ಸೂಕ್ತವಾದ ಆದೇಶವನ್ನು ಈಗಾಗಲೇ ಕೊಡಲಾಗಿದೆ. ಇವರಂತೆ ಈಚೆಗೆ ಅಕ್ವಿಸೆಷನ್ ಪ್ರೊಸೀಡಿಂಗ್ಸ್ ಬಹಳ ತೀವ್ರವಾಗಿ ನಡೆಯುತ್ತಿದೆ.

ಅಧ್ಯಕ್ಷರು :—ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಹೆಲ್ಡ್ ಓವರು ಪ್ರಶ್ನೆಗಳು.

STARTING OF A MILK DAIRY PROJECT IN RAICHUR TOWN

66. SRI M. NAGAPPA (Raichur) :—

Will the Minister of State for Veterinary Services, Animal Husbandry and Dairy Development be pleased to state :—

(*a*) whether there is any scheme to start milk dairy project in Raichur town ;

(*b*) if so, when this Project would start functining ?

SRI G. B. SHANKAR RAO (MINISTER OF STATE FOR VETERINARY SERVICES, ANIMAL HUSBANDRY AND DAIRY DEVELOPMENT) :—

(*a*) Yes.

(*b*) Raichur has been included in the IV Five Year Plan amongst four towns having more than 50,000 human population to establish a Rural Dairy Centre and the project is before the Government for a decision.

ಶ್ರೀ ಎಂ. ನಾಗಪ್ಪ :—ಸರ್ಕಾರದ ನಿರ್ಣಯವಾಗಿಲ್ಲ ಎಂದು ಹೇಳಂತ್ತಿರಿ. ಇನ್ನೆಷ್ಟು ವರ್ಷದೊಳಗೆ ಇದರ ಬಗ್ಗೆ ನಿರ್ಣಯವಾಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಜಿ. ಬಿ. ಶಂಕರ ರಾವ್ .—ಇದರಲ್ಲಿ ಪ್ಲಾನು ಸೀಲಿಂಗನಲ್ಲಿ ಹಣ ಸಲ ಕಡಿಮೆ ಬಂದುದರಿಂದ ಇಂತಹ ಕೇಂದ್ರಗಳನು ತೆರೆಯಲು ಸಾಧ್ಯವಾಗಲಿಲ್ಲ.

ಶ್ರೀ ಎಂ. ನಾಗಪ್ಪ .—ಸರಕಾರ ಇದರ ಬಗ್ಗೆ ಯೋಜನೆ ಮಾಡಲು ಇನ್ನೆಷ್ಟು ದಿನಗಳು ಬೇಕಾಗುತ್ತದೆ ?

ಶ್ರೀ ಜಿ. ಬಿ. ಶಂಕರರಾವ್ :—ಪ್ಲಾನು ಸೀಲಿಂಗು ನಮಗೆ ಕಡಿಮೆ ಮಾಡಲಾಗಿದೆ. A proportionate reduction shall have to be done with respect to the expenditure to be incurred. We have to see whether this Rural Dairy Centre Project could be implemented within the Plan resources.

ಶ್ರೀ ಎಂ. ನಾಗಪ್ಪ :—ಸುಮಾರು ೮-೧೦ ದಿನಗಳ ಹಿಂದೆ ರೇಡಿಯೋದಲ್ಲಿ ಹಾಗೂ ಪತ್ರಿಕೆಗಳಲ್ಲಿ ರಾಯಚೂರಿಗೆ ಒಂದು ಹಾಲಿನ ಕೇಂದ್ರವನ್ನು ಮಂಜೂರು ಮಾಡಲಾಗಿದೆ ಎನ್ನುವ ಒಂದು ವರದಿಯನ್ನು ನೋಡಿದೆವು. ಇದು ನಿಜವೇ ಇಲ್ಲವೇ ಅಸತ್ಯವಾದುದೇ ತಿಳಿಸುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್ :—ಇದು ಅಸತ್ಯವಾದ ವರದಿ, ನಾವು ಯಾರು ಇಂತಹ ವರದಿಯನ್ನು ಕೊಟ್ಟಿಲ್ಲ.

ಶ್ರೀ ಎಂ. ನಾಗಪ್ಪ .—ರಾಯಚೂರಿನಲ್ಲಿ ಮಾಡಬೇಕೆಂದಿರುವ ಹಾಲಿನ ಕೇಂದ್ರದ ರೂಪುರೇಖೆಗಳೇನು ?

SRI G. B. SHANKAR RAO :—According to the conception of the Rural Dairy Centre, we have proposed to start a sort of small dairy project for handling about 5,000 litres of raw milk and distribute it to the consumers in the City of Raichur. We are thinking of establishing and organising Co-operative Societies round about so that the farmers may get accustomed to the modern way of milk marketing through the Co-operative institutions and also take up dairy farming on scientific lines.

ಶ್ರೀ ಎಂ. ನಾಗಪ್ಪ .—ಇನ್ನೆಷ್ಟು ದಿವಸಗಳಲ್ಲಿ ಇದನ್ನು ಮಾಡುತ್ತಿರಿ ಎನ್ನುವ ಭರವಸೆಯನ್ನು ಇಲ್ಲಿ ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್ :—ಇದನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕು ಎಂದು ಇದೆ.

ಶ್ರೀ ಎಂ. ನಾಗಪ್ಪ .—ನಾಲ್ಕನೇ ಯೋಜನೆ ಎಂದರೆ ಐದು ವರ್ಷಗಳಾಯಿತು, ಇದನ್ನು ೧೯೭೦-೭೧ನೇ ಸಾಲಿನಲ್ಲೇ ಮುಗಿಸಿಕೊಡಲು ಆಗುವುದಿಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್ .—ಪ್ಲಾನ್ ಸೀಲಿಂಗು ೧೫೦ ಲಕ್ಷದಿಂದ ೧೩೦ ಲಕ್ಷಕ್ಕೆ ಇಳಿಸಿರುವುದರಿಂದಾಗಿ ನಮಗೆ ಹಣದ ಕೊರತೆ ಬಂದಿದೆ ಇದಕ್ಕಾಗಿ ಮುಂದಿನ ಐದು ವರ್ಷಗಳಲ್ಲಿ ನಾಲ್ಕು ಹಾಲಿನ ಕೇಂದ್ರಗಳನ್ನು ಮಾಡಬೇಕೆಂದು ಇದೆ. ಇದನ್ನು ಮಾಡುವಾಗ ರಾಯಚೂರಿನ ಸೆಂಟರನ್ನು ಮುಂದಿನ ವರ್ಷವೇ ಮಾಡಬಹುದೇ ಇಲ್ಲವೇ ಆ ನಂತರ ಮಾಡಬಹುದೇ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ.